ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

# HASSAN INSTITUTE OF MEDICAL SCIENCES, HASSAN

(An Autonomous Institute under the Dept of Medical Education, Government of Karnataka)

SRI CHAMARAJENDRA HOSPITAL CAMPUS, HASSAN-573201

Website: www.hims-hassan.org Phone/Fax No.08172-231699 Email:directorhims@yahoo.com

## 20ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 20ನೇ ಆರ್ಥಿಕ ಸಮಿತಿ ಸಭೆಯು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ, ಹಿಮ್ಸ್, ಹಾಸನ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:20-12-2018ರಂದು ಗುರುವಾರ ಮಧ್ಯಾಹ್ನ:3.00ಗಂಟೆಗೆ ಸುವರ್ಣಸೌಧ, ಬೆಳಗಾವಿಯಲ್ಲಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ:10** **ಹಾಜರಿದ್ದ ಸದಸ್ಯರ ಸಂಖ್ಯೆ:06**

| | | | |
|---|---|---|---|
| 1 | ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, 4ನೇ ಹಂತ, ಬೆಂಗಳೂರು. | ಅಧ್ಯಕ್ಷರು | ಹಾಜರಿರುತ್ತಾರೆ |
| 2 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | -- |
| 3 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | -- |
| 4 | ಮಾನ್ಯ ಸರ್ಕಾರದ ಉಪಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, 4ನೇ ಹಂತ, ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ |
| 5 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ |
| 6 | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 7 | ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | -- |
| 8 | ಪ್ರಾಂಶುಪಾಲರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 9 | ವೈದ್ಯಕೀಯ ಅಧೀಕ್ಷಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 10 | ಆರ್ಥಿಕ ಸಲಹೆಗಾರರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | -- |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ |
|---|---|---|
| 1 | ದಿನಾಂಕ:21-05-2018ರಂದು ನಡೆದ 19ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದರ ಬಗ್ಗೆ. | ದಿನಾಂಕ:21-05-2018ರಂದು ನಡೆದ 19ನೇ ಆರ್ಥಿಕ ಸಮಿತಿ ಸಭೆಯಲ್ಲಿ 18 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡಿದ್ದ ತೀರ್ಮಾನದಂತೆ ಸಂಸ್ಥೆಯಿಂದ ತೆಗೆದುಕೊಂಡಿರುವ ಕ್ರಮಗಳ ಅನುಪಾಲನಾ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ಸದರಿ ಸಭೆಯ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 2 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2016-17 ಮತ್ತು 2017-18ನೇ ಸಾಲಿನ ಲೆಕ್ಕ-ಪರಿಶೋಧನೆಯನ್ನು ಶ್ರೀ.ಹೆಚ್.ಡಿ. ಅಭಿನಂದನ್, ಚಾರ್ಟರ್ಡ್ ಅಕೌಂಟೆಂಟ್, ಹಾಸನ ಇವರು ಪೂರ್ಣಗೊಳಿಸಿ ಸಲ್ಲಿಸಿರುವ ಆಡಿಟ್ ವರದಿಯನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಬೋಧಕ ಆಸ್ಪತ್ರೆ, ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ, ಹಾಸನ, ಮತ್ತು ಹೊಳೆನರಸೀಪುರ ಹಾಗೂ ವಿದ್ಯಾರ್ಥಿ ವಸತಿ ನಿಲಯಗಳ 2016-17 ಮತ್ತು 2017-18ನೇ ಸಾಲಿನ ಲೆಕ್ಕ-ಪರಿಶೋಧನೆಯನ್ನು ಸಂಸ್ಥೆಯಿಂದ ನೇಮಕಮಾಡಿರುವ ಶ್ರೀ.ಹೆಚ್.ಡಿ.ಅಭಿನಂದನ್, ಚಾರ್ಟರ್ಡ್ ಅಕೌಂಟೆಂಟ್, ಹಾಸನ ಇವರು ಪೂರ್ಣಗೊಳಿಸಿ ಸಲ್ಲಿಸಿದ್ದ ಲೆಕ್ಕ-ಪರಿಶೋಧನಾ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ಸದರಿ ಸಾಲುಗಳ ಲೆಕ್ಕ-ಪರಿಶೋಧನಾ ವರದಿಯನ್ನು ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಸರ್ವಾನುಮತದಿಂದ ಒಪ್ಪಿ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದೆಂದು ತೀರ್ಮಾನಿಸಲಾಯಿತು. |
| 3 | 2018-19ನೇ ಸಾಲಿನಲ್ಲಿ ಹಿಮ್ಸ್ ಸಂಸ್ಥೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಮತ್ತು ವೆಚ್ಚಗಳ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿಮರ್ಶೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರದಿಂದ 2018-19ನೇ ಸಾಲಿಗೆ ವಿವಿಧ ಲೆಕ್ಕ-ಶೀರ್ಷಿಕೆಯಡಿಯಲ್ಲಿ ನಿಗದಿಯಾಗಿರುವ ಅನುದಾನ, ಪ್ರಸ್ತುತ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ, ಯೂಸರ್ಸ್ ನಿಧಿಯಿಂದ ಸಂಗ್ರಹವಾದ ಶುಲ್ಕ, ಬ್ಯಾಂಕ್‌ನಲ್ಲಿ ಠೇವಣಿ ರೂಪದಲ್ಲಿ ಇರುವ ನಗದು ಹಾಗೂ ಪ್ರಸ್ತುತ ದಿನಾಂಕದವರೆಗೂ ಮಾಡಿರುವ ವೆಚ್ಚಗಳ ಸವಿವರವಾದ ಮಾಹಿತಿಗಳ ಜೊತೆಗೆ 2018-19ನೇ ಸಾಲಿನಲ್ಲಿ 101, 103, ಮತ್ತು 115 ಲೆಕ್ಕ ಶೀರ್ಷಿಕೆ ಯಡಿಯಲ್ಲಿ ನಿಗದಿಯಾಗಿರುವ ಅನುದಾನದಲ್ಲಿ ಪ್ರಸ್ತುತ ಸಾಲಿಗೆ ಕೊರತೆಯಾಗುವ ಅನುದಾನದ ಸವಿವರ ಮಾಹಿತಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಹಿಮ್ಸ್ ಸಂಸ್ಥೆಗೆ ಪ್ರಸ್ತುತ ಸಾಲಿನಲ್ಲಿ ಸರ್ಕಾರದಿಂದ ವಿವಿಧ ಲೆಕ್ಕಶೀರ್ಷಿಕೆಯಡಿ ಬಿಡುಗಡೆಯಾಗಿರುವ ಅನುದಾನ ಮತ್ತು ಹಣ ಬಳಕೆಯ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. ಹಾಗೂ ಪ್ರಸ್ತುತ ಸಾಲಿನಲ್ಲಿ ಕೊರತೆಯಾಗುವ ಅನುದಾನಕ್ಕೆ ಪ್ರತ್ಯೇಕವಾದ ಪ್ರಸ್ತಾವನೆಯನ್ನು ಸಲ್ಲಿಸಲು ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ |
|---|---|---|
| 4 | 2019–20ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಭದ್ರತಾ ಮತ್ತು ಇತರೆ ಸೇವೆಗಳು ಹಾಗೂ ಗ್ರೂಪ್ 'ಡಿ'ಅಟೆಂಡರ್ ಸೇವೆಗಳನ್ನು ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಒಂದು ವರ್ಷದ ಅವಧಿಗೆ ಇ-ಟೆಂಡರ್ ಕರೆಯುವ ಬಗ್ಗೆ. | ಸಂಸ್ಥೆಯ ವೈದ್ಯಕೀಯ ಕಾಲೇಜು, ಹೊಸ ಮತ್ತು ಹಳೆಯ ಬೋಧಕ ಆಸ್ಪತ್ರೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಹಾಸನ ಮತ್ತು ಹೊಳೆನರಸೀಪುರ ಈ ಸಂಸ್ಥೆಗಳಿಗೆ ಭದ್ರತಾ ಮತ್ತು ಇತರೆ ಸೇವೆಗಳಿಗೆ ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆಯಲಾಗಿದ್ದ ಇ-ಟೆಂಡರ್ ಅವಧಿಯು ದಿನಾಂಕ:30–04–2019 ಕ್ಕೆ ಮುಕ್ತಾಯಗೊಳ್ಳುವುದರಿಂದ 2019–20ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಭದ್ರತಾ ಮತ್ತು ಇತರೆ ಸೇವೆಗಳನ್ನು ಒಂದು ವರ್ಷದ ಅವಧಿಗೆ ಇ-ಟೆಂಡರ್ ಮೂಲಕ ಪಡೆಯುವ ಕೆಳಕಂಡ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. |

| ಎ | ಕ್ರಮ ಸಂಖ್ಯೆ | ಹುದ್ದೆಗಳ ವಿವರ | 2019–20ನೇ ಸಾಲಿಗೆ ಇ-ಟೆಂಡರ್ ಮೂಲಕ ಪಡೆಯಬೇಕಾಗಿರುವ ಕಾರ್ಮಿಕರ ಸಂಖ್ಯೆ | ಒಟ್ಟು ಕಾರ್ಮಿಕರ ಸಂಖ್ಯೆ | 2019–20ನೇ ಸಾಲಿನ ವಾರ್ಷಿಕ ವೆಚ್ಚ |
|---|---|---|---|---|---|
| | 1 | ಸೆಕ್ಯೂರಿಟಿ ಸೂಪರ್ ವೈಸರ್ | 04 | 167 | 3,70,96,721–00 |
| | 2 | ಸೆಕ್ಯೂರಿಟಿ ಗಾರ್ಡ್ಸ್ | 94 | | |
| | 3 | ಅಂಬುಲೆನ್ಸ್ ವಾಹನ ಚಾಲಕರು | 05 | | |
| | 4 | ಕಛೇರಿ ವಾಹನ ಚಾಲಕರು | 02 | | |
| | 5 | ಗಾರ್ಡನರ್ | 06 | | |
| | 6 | ಲಿಫ್ಟ್ ಆಪರೇಟರ್ | 08 | | |
| | 7 | ಫಾರ್ಮಸಿಸ್ಟ್ | 04 | | |
| | 8 | ಡೇಟಾ ಎಂಟ್ರಿ ಆಪರೇಟರ್ಸ್ | 26 | | |
| | 9 | ಇ.ಇ.ಜಿ. ತಂತ್ರಜ್ಞರು | 01 | | |
| | 10 | ಕ್ಷ–ಕಿರಣ ತಂತ್ರಜ್ಞರು | 04 | | |
| | 11 | ಎಮ್.ಆರ್.ಐ. ತಂತ್ರಜ್ಞರು | 03 | | |
| | 12 | ದೈಹಿಕ ಶಿಕ್ಷಕರು | 01 | | |
| | 13 | ಕ್ಷೌರಿಕ (ಬಾರ್ಬರ್) | 01 | | |
| | 14 | ಅಡುಗೆ ಸಹಾಯಕರು | 08 | | |
| ಬಿ | 01 | ಗ್ರೂಪ್ ಡಿ | 146 | 146 | 2,89,62,039–00 |
| | | ಒಟ್ಟು ಕಾರ್ಮಿಕರ ಸಂಖ್ಯೆ | | 313 | 6,60,58,760–00 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ 2019–20ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಭದ್ರತಾ ಮತ್ತು ಇತರೆ ಸೇವೆಗಳಿಗೆ ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆಯುವ ಒಟ್ಟು 167 ಕಾರ್ಮಿಕರಿಗೆ ತಗಲುವ ವೆಚ್ಚ ರೂ.**3,70,96,721–00** ಮತ್ತು 146 ಗ್ರೂಪ್ 'ಡಿ' ಕಾರ್ಮಿಕರಿಗೆ ತಗಲುವ ವೆಚ್ಚ ರೂ. **2,89,62,039–00ಗಳಿಗೆ** ಎರಡು ಪ್ರತ್ಯೇಕ ಟೆಂಡರ್‌ಗಳನ್ನಾಗಿ ಕೆ.ಟಿ.ಪಿ.ಪಿ ನಿಯಮ 1999–2000ರ ಪ್ರಕಾರ ಇ–ಟೆಂಡರ್ ಕರೆಯುವುದೆಂದು ತೀರ್ಮಾನಿಸಿ, ಸದರಿ ವೆಚ್ಚವನ್ನು 2210–05–105–1–49–115 ಗುತ್ತಿಗೆ/ಹೊರಗುತ್ತಿಗೆ ಲೆಕ್ಕ–ಶೀರ್ಷಿಕೆಯಡಿ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br>ಮುಂದುವರೆದು ಸರ್ಕಾರವು ಆರೋಗ್ಯ ಕರ್ನಾಟಕ ವಿಮಾ ಯೋಜನೆಯನ್ನು ಜಾರಿಗೊಳಿಸಿದ್ದು, ಸದರಿ ಯೋಜನೆಯಡಿ ಚಿಕಿತ್ಸೆ ಪಡೆಯುವ ಫಲಾನುಭವಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿರುವುದರಿಂದ ಸದರಿ ಮಾಹಿತಿಗಳನ್ನು ಸಂಬಂಧಿತ ಕೇಂದ್ರಕ್ಕೆ ಅನುಮೋದನೆಗೆ (ಪ್ರಿಯಾತ್ ಮತ್ತು ಕ್ಲೇಮ್) ಕಳುಹಿಸಲು 06 ಜನ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ತುರ್ತಾಗಿ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಡುವಂತೆ ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು ಮನವಿ ಸಲ್ಲಿಸಿರುವುದರಿಂದ ಇ–ಟೆಂಡರ್ ಪ್ರಕ್ರಿಯೆ ಮೂಲಕ ಸದರಿ ಕಾರ್ಮಿಕರುಗಳನ್ನು ನೇಮಕ ಮಾಡಿಕೊಳ್ಳುವವರೆಗೂ ತಾತ್ಕಾಲಿಕವಾಗಿ 06 ಜನ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ಸದರಿ ಕಾರ್ಮಿಕರ ವೇತನವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ನಿರ್ಣಯ ಕೈಗೊಳ್ಳಲಾಯಿತು. |
| 5 | 2019–20ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಸ್ವಚ್ಛತಾ ಸೇವೆಗಳನ್ನು ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಒಂದು ವರ್ಷದ ಅವಧಿಗೆ ಇ–ಟೆಂಡರ್ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಹೊಸ ಬೋಧಕ ಆಸ್ಪತ್ರೆ, ಹಳೆ ಆಸ್ಪತ್ರೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ ಮತ್ತು ಹೊಳೆನರಸೀಪುರ ಈ ಕಟ್ಟಡಗಳ ಸ್ವಚ್ಛತಾ ನಿರ್ವಹಣೆಗಾಗಿ ಸ್ವಚ್ಛತಾ ಪದಾರ್ಥಗಳು, ಎಲೆಕ್ಟ್ರಿಕಲ್ ಸಾಮಗ್ರಿಗಳು, ಪ್ಲಂಬಿಂಗ್ ಸಾಮಾಗ್ರಿಗಳು ಹಾಗೂ ಅವಶ್ಯಕ ಸ್ವಚ್ಛತಾ ಸಿಬ್ಬಂದಿಗಳ ಸಂಖ್ಯೆ ಸೇರಿಸಿ ಹೊರಸಂಪನ್ಮೂಲ ಏಜೆನ್ಸಿಯಿಂದ ಪಡೆಯಲಾಗಿದ್ದ ಇ–ಟೆಂಡರ್ ಅವಧಿಯು ದಿನಾಂಕ:30–04–2019ಕ್ಕೆ ಮುಕ್ತಾಯಗೊಳ್ಳುವುದರಿಂದ 2019–20ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಎಲ್ಲಾ ಸಂಸ್ಥೆಗಳ ಕಟ್ಟಡಗಳ ಸ್ವಚ್ಛತಾ ನಿರ್ವಹಣೆಗೆ ಹೊರಸಂಪನ್ಮೂಲ ಏಜೆನ್ಸಿಯಿಂದ ಇ–ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ
ಹಿಮ್ಸ್ ಹಾಸನ

<table>
<tr><th>ಅಜೆಂಡಾ ಕ್ರಮಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td>ಕರೆಯುವ ಬಗ್ಗೆ.</td><td>
<table>
<tr><th>ಕ್ರ.ಸಂ</th><th>ಹುದ್ದೆಗಳ ವಿವರ</th><th>ಕಾರ್ಮಿಕರ ಸಂಖ್ಯೆ</th><th>ಒಟ್ಟು ಕಾರ್ಮಿಕರ ಸಂಖ್ಯೆ</th><th>ವಾರ್ಷಿಕ ವೆಚ್ಚ</th></tr>
<tr><td>1</td><td>ಸ್ವಚ್ಛತಾ ಸಿಬ್ಬಂದಿ<br>(ಸ್ಕ್ಯಾವೆಂಜರ್ಸ್ ಮತ್ತು ರಿಲಿವರ್ಸ್ ಸೇರಿ)</td><td>112</td><td rowspan="5">127</td><td rowspan="5">3,79,67,130.00</td></tr>
<tr><td>2</td><td>ಸ್ವಚ್ಛತಾ ಸೂಪರ್ ವೈಸರ್ಸ್</td><td>03</td></tr>
<tr><td>3</td><td>ಎಲೆಕ್ಟ್ರಿಷಿಯನ್</td><td>06</td></tr>
<tr><td>4</td><td>ಪ್ಲಂಬರ್</td><td>05</td></tr>
<tr><td>5</td><td>ಮರಗೆಲಸಗಾರರು</td><td>01</td></tr>
<tr><td colspan="3">ಒಟ್ಟು</td><td>127</td><td>3,79,67,130.00</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, 2019–20ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಎಲ್ಲಾ ಕಟ್ಟಡಗಳ ಸ್ವಚ್ಛತಾ ನಿರ್ವಹಣೆಗೆ ಅವಶ್ಯಕವಿರುವ ಸ್ವಚ್ಛತಾ ಪದಾರ್ಥಗಳು, ಎಲೆಕ್ಟ್ರಿಕಲ್ ಸಾಮಗ್ರಿಗಳು, ಪ್ಲಂಬಿಂಗ್ ಸಾಮಾಗ್ರಿಗಳು ಹಾಗೂ ಅವಶ್ಯಕ ವಿವಿಧ 127 ಕಾರ್ಮಿಕರುಗಳ ಸಂಖ್ಯೆ ಸೇರಿಸಿ ಕೆ.ಟಿ.ಪಿ.ಪಿ ನಿಯಮ 1919–2000ರ ಪ್ರಕಾರ ರೂ3,79,67,130.00ಗಳ ವೆಚ್ಚದಲ್ಲಿ ಇ–ಟೆಂಡರ್ ಕರೆಯುವುದೆಂದು ತೀರ್ಮಾನಿಸಿ, ಸದರಿ ವೆಚ್ಚವನ್ನು 2210–05–105–1–49–115 ಗುತ್ತಿಗೆ/ಹೊರಗುತ್ತಿಗೆ ಲೆಕ್ಕ–ಶೀರ್ಷಿಕೆಯಡಿ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.</td></tr>
<tr><td>6</td><td>ಸಂಸ್ಥೆಯ ಕಾಲೇಜು ವಿಭಾಗ, ಬೋಧಕ ಆಸ್ಪತ್ರೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ ಮತ್ತು ಹೊಳೆನರಸೀಪುರ ಇಲ್ಲಿಗೆ ಅಗತ್ಯವಿರುವ ಸ್ಟೇಷನರಿ ಸಾಮಗ್ರಿಗಳನ್ನು ಕೆ.ಟಿ.ಟಿ.ಪಿ ನಿಯಮಾನುಸಾರ ಒಂದು ವರ್ಷದ ಅವಧಿಗೆ (2019–20) ಇ–ಟೆಂಡರ್ ಕರೆಯುವ ಬಗ್ಗೆ.</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ವಿಭಾಗ, ಬೋಧಕ ಆಸ್ಪತ್ರೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ ಮತ್ತು ಹೊಳೆನರಸೀಪುರ ಇಲ್ಲಿಗೆ ಒಂದು ವರ್ಷದ ಅವಧಿಗೆ ಅಗತ್ಯವಿರುವ ಸ್ಟೇಷನರಿ ಸಾಮಗ್ರಿಗಳನ್ನು ಖರೀದಿಸಲು 2018–19ನೇ ಸಾಲಿಗೆ ರೂ.7.50 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕರೆಯಲಾಗಿದ್ದ ಇ–ಟೆಂಡರ್ ಅವಧಿಯು ದಿನಾಂಕ:15–07–2019 ರಂದು ಮುಕ್ತಾಯಗೊಳ್ಳಲಿದ್ದು, ರೋಗಿಗಳ ಸಂಖ್ಯೆ ಹೆಚ್ಚಳ ಎಮ್.ಬಿ.ಬಿ.ಎಸ್ ವಿದ್ಯಾರ್ಥಿಗಳ ಪ್ರವೇಶಮಿತಿ 100 ರಿಂದ 150ಕ್ಕೆ ಹೆಚ್ಚಿಸಿರುವುದು, ವಿವಿಧ ವಿಭಾಗಗಳಲ್ಲಿ ಸ್ನಾತ್ತಕೋತ್ತರ ಪದವಿ ಪ್ರಾರಂಭಿಸಿರುವುದು, ಕಾಯಕಲ್ಪ, ಎನ್.ಕ್ಯೂ.ಎ.ಎಸ್, ಎನ್.ಇ.ಬಿ.ಹೆಚ್ ಯೋಜನೆಗಳು ಜಾರಿಯಲ್ಲಿರುವುದರಿಂದ ಅವಶ್ಯಕ ಸಾದಿಲ್ವಾರುಗಳ ಪ್ರಮಾಣ ಹೆಚ್ಚಾಗಿರುವುದರ ಜೊತೆಗೆ 2019–20ನೇ ಸಾಲಿಗೆ ಸಾದಿಲ್ವಾರುಗಳ ಖರೀದಿಗೆ ಅಂದಾಜು ರೂ.14.20 ಲಕ್ಷಗಳಿಗೆ ಹೆಚ್ಚುವರಿಯಾಗುವುದರ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು, ಸಭೆಯಲ್ಲಿ ಮಂಡಿಸಿದರು.</td></tr>
</table>

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ರೋಗಿಗಳ ಸಂಖ್ಯೆ ಹೆಚ್ಚಿರುವುದು, ವಿದ್ಯಾರ್ಥಿಗಳ ಪ್ರವೇಶ ಮಿತಿ ಹೆಚ್ಚಿರುವುದು, ವಿವಿಧ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ ಪ್ರಾರಂಭ, ಕಾಯಕಲ್ಪ, ಎನ್.ಕ್ಯೂ.ಎ.ಎಸ್, ಎನ್.ಇ.ಬಿ.ಹೆಚ್ ಯೋಜನೆಗಳು ಜಾರಿಯಲ್ಲಿರುವುದರಿಂದ ಸಾದಿಲ್ವಾರು ಸಾಮಗ್ರಿಗಳ ಅಧಿಕವಾಗುವುದೆಂದು ಪರಿಗಣಿಸಿ 2019-20ನೇ ಸಾಲಿಗೆ ಸಾದಿಲ್ವಾರುಗಳ ಖರೀದಿಗೆ ತಗಲುವ ಅಂದಾಜು ವೆಚ್ಚ ರೂ.14.20 ಲಕ್ಷಗಳಿಗೆ ಅನುಮೋದನೆ ನೀಡಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದೆಂದು ಹಾಗೂ ಸದರಿ ವೆಚ್ಚವನ್ನು ಸಂಸ್ಥೆಗೆ ಸರ್ಕಾರದಿಂದ ಬಿಡುಗಡೆಯಾಗುವ ಲೆಕ್ಕ ಶೀರ್ಷಿಕೆ 2210-05-105-1-49-103 ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 7 | ಸಂಸ್ಥೆಯ ಬೋಧಕ ಆಸ್ಪತ್ರೆ ಮತ್ತು ಕಾಲೇಜು ವಿಭಾಗಗಳಿಗೆ ಅಗತ್ಯವಿರುವ ಮುದ್ರಣ ಸಾಮಗ್ರಿಗಳನ್ನು ಸರಬರಾಜು ಪಡೆಯಲು 2019-20ನೇ ಸಾಲಿಗೆ ಒಂದು ವರ್ಷದ ಅವಧಿಗೆ ಇ-ಟೆಂಡರ್ ಕರೆಯುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ವಿಭಾಗ, ಬೋಧಕ ಆಸ್ಪತ್ರೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ ಮತ್ತು ಹೊಳೆನರಸೀಪುರ ಇಲ್ಲಿಗೆ ಒಂದು ವರ್ಷದ ಅವಧಿಗೆ ಅಗತ್ಯವಿರುವ ಮುದ್ರಣ ಸಾಮಗ್ರಿಗಳ ಸರಬರಾಜಿಗೆ 2018-19ನೇ ಸಾಲಿಗೆ ರೂ.9.70 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕರೆಯಲಾಗಿದ್ದ ಇ-ಟೆಂಡರ್ ಅವಧಿಯು ದಿನಾಂಕ:15-07-2019 ರಂದು ಮುಕ್ತಾಯಗೊಳ್ಳಲಿದ್ದು, ರೋಗಿಗಳ ಸಂಖ್ಯೆ ಹೆಚ್ಚಳ ಎಮ್.ಬಿ.ಬಿ.ಎಸ್ ವಿದ್ಯಾರ್ಥಿಗಳ ಪ್ರವೇಶಮಿತಿ 100 ರಿಂದ 150ಕ್ಕೆ ಹೆಚ್ಚಿಸಿರುವುದು, ವಿವಿಧ ವಿಭಾಗಗಳಲ್ಲಿ ಸ್ನಾತ್ತಕೋತ್ತರ ಪದವಿ ಪ್ರಾರಂಭಿಸಿರುವುದು, ಕಾಯಕಲ್ಪ, ಎನ್.ಕ್ಯೂ.ಎ.ಎಸ್, ಎನ್.ಇ.ಬಿ.ಹೆಚ್ ಯೋಜನೆಗಳು ಜಾರಿಯಲ್ಲಿರುವುದರಿಂದ ಅವಶ್ಯಕ ಸಾದಿಲ್ವಾರುಗಳ ಪ್ರಮಾಣ ಹೆಚ್ಚಾಗಿರುವುದರ ಜೊತೆಗೆ 2019-20ನೇ ಸಾಲಿಗೆ ಮುದ್ರಣ ವೆಚ್ಚ ಅಂದಾಜು ರೂ.11.34 ಲಕ್ಷಗಳಿಗೆ ಹೆಚ್ಚುವರಿಯಾಗುವುದರ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು, ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ರೋಗಿಗಳ ಸಂಖ್ಯೆ ಹೆಚ್ಚಿರುವುದು, ವಿದ್ಯಾರ್ಥಿಗಳ ಪ್ರವೇಶ ಮಿತಿ ಹೆಚ್ಚಿರುವುದು, ವಿವಿಧ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ ಪ್ರಾರಂಭ, ಕಾಯಕಲ್ಪ, ಎನ್.ಕ್ಯೂ.ಎ.ಎಸ್, ಎನ್.ಇ.ಬಿ.ಹೆಚ್ ಯೋಜನೆಗಳು ಜಾರಿಯಲ್ಲಿರುವುದರಿಂದ ಮುದ್ರಣ ಸಾಮಗ್ರಿಗಳ ಅಧಿಕವಾಗುವುದೆಂದು ಪರಿಗಣಿಸಿ 2019-20ನೇ ಸಾಲಿಗೆ ಮುದ್ರಣ ಸಾಮಗ್ರಿಗಳಿಗೆ ತಗಲುವ ಅಂದಾಜು ವೆಚ್ಚ ರೂ.11.34 ಲಕ್ಷಗಳಿಗೆ ಅನುಮೋದನೆ ನೀಡಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದೆಂದು ಹಾಗೂ ಸದರಿ ವೆಚ್ಚವನ್ನು ಸಂಸ್ಥೆಗೆ ಸರ್ಕಾರದಿಂದ ಬಿಡುಗಡೆಯಾಗುವ ಲೆಕ್ಕ ಶೀರ್ಷಿಕೆ 2210-05-105-1-49-103 ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ |
|---|---|---|
| 8 | ಸಂಸ್ಥೆಯ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ತುರ್ತು ಸಂದರ್ಭದಲ್ಲಿ ಬಳಸಿಕೊಳ್ಳಲು 46.7 ಲೀಟರ್ ಸಾಮರ್ಥ್ಯದ 50 ಜಂಬೋ ಆಕ್ಸಿಜನ್ ಮತ್ತು 46.7 ಲೀಟರ್ ಸಾಮರ್ಥ್ಯದ 04 ಜಂಬೋ ನೈಟ್ರಸ್ ಆಕ್ಸೈಡ್ ಸಿಲಿಂಡರ್‌ಗಳನ್ನು ಇ-ಟೆಂಡರ್ ಮೂಲಕ ಖರೀದಿಸುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಆಕ್ಸಿಜನ್ ಸರಬರಾಜು ಮಾಡುವ ಲಿಕ್ವಿಡ್ ಆಕ್ಸಿಜನ್ ಪ್ಲಾಂಟ್ ಕಾರ್ಯಾ ನಿರ್ವಹಿಸುತ್ತಿದ್ದು, ಯಾವುದಾದರೂ ಸಂದರ್ಭಗಳಲ್ಲಿ ಲಿಕ್ವಿಡ್ ಆಕ್ಸಿಜನ್ ಪ್ಲಾಂಟ್ ಕಾರ್ಯವು ಆಕಸ್ಮಿಕವಾಗಿ ಸ್ಥಗಿತಗೊಂಡಲ್ಲಿ ತುರ್ತು ಸಂದರ್ಭಗಳಿಗಾಗಿ ಮ್ಯಾನಿ ಪೋಲ್ಡ್ ಕೊಠಡಿಯಲ್ಲಿ 46.7 ಲೀಟರ್ ಸಾಮರ್ಥ್ಯದ 50 ಜಂಬೋ ಆಕ್ಸಿಜನ್ ಸಿಲೆಂಡರ್‌ಗಳು ಮತ್ತು 46.7 ಲೀಟರ್ 04 ಜಂಬೋ ನೈಟ್ರಸ್ ಆಕ್ಸೈಡ್ ಸಿಲಿಂಡರ್‌ಗಳನ್ನು ಸ್ಟ್ಯಾಂಡ್ ಬೈಆಗಿ ಇಟ್ಟು ಕೊಳ್ಳಬೇಕಾಗಿದ್ದು ಸದರಿ ಖಾಲಿ ಸಿಲೆಂಡರ್‌ಗಳ ಖರೀದಿಗೆ ಒಂದು ಸಿಲಿಂಡರ್‌ಗಳಿಗೆ ಅಂದಾಜು ರೂ.14,000/-ಗಳಂತೆ 54 ಸಿಲಿಂಡರ್‌ಗಳ ಖರೀದಿಗೆ ಅಂದಾಜು ರೂ.7.56ಲಕ್ಷಗಳಾಗುತ್ತದೆ ಹಾಗೂ ಖಾಲಿ ಇರುವ ಸಿಲಿಂಡರ್‌ಗಳಿಗೆ ಆಕ್ಸಿಜನ್ ಮತ್ತು ನೈಟ್ರಸ್ ಆಕ್ಸೈಡ್ ಸರಬರಾಜು ಪಡೆದುಕೊಳ್ಳುವ ಸಲುವಾಗಿ ನಿಯಮಾನುಸಾರ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಪ್ರಸ್ತಾವನೆಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ತುರ್ತು ಸಂದರ್ಭದ ಬಳಕೆಗಾಗಿ ಮ್ಯಾನಿ ಪೋಲ್ಡ್ ಕೊಠಡಿಯಲ್ಲಿ 46.7 ಲೀಟರ್ ಸಾಮರ್ಥ್ಯದ 50 ಜಂಬೋ ಆಕ್ಸಿಜನ್ ಸಿಲೆಂಡರ್‌ಗಳು ಮತ್ತು 46.7 ಲೀಟರ್ 04 ಜಂಬೋ ನೈಟ್ರಸ್ ಆಕ್ಸೈಡ್ ಸಿಲಿಂಡರ್‌ಗಳನ್ನು ಸ್ಟ್ಯಾಂಡ್ ಬೈಆಗಿ ಇಟ್ಟು ಕೊಳ್ಳಲು ಸಿಲಿಂಡರ್‌ಗಳ ಖರೀದಿಗೆ ತಗಲುವ ಅಂದಾಜು ವೆಚ್ಚ ರೂ.7.56 ಲಕ್ಷಗಳಿಗೆ ಮತ್ತು ಖಾಲಿ ಇರುವ ಸಿಲಿಂಡರ್‌ಗಳಿಗೆ ಆಕ್ಸಿಜನ್ ಮತ್ತು ನೈಟ್ರಸ್ ಆಕ್ಸೈಡ್ ಸರಬರಾಜು ಪಡೆದುಕೊಳ್ಳಲು ಅನುಕೂಲವಾಗುವಂತೆ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದೆಂದು ಹಾಗೂ ಸದರಿ ವೆಚ್ಚವನ್ನು ಸಂಸ್ಥೆಗೆ ಸರ್ಕಾರದಿಂದ ಬಿಡುಗಡೆಯಾಗುವ ಲೆಕ್ಕ ಶೀರ್ಷಿಕೆ 2210-05-105-1-49-103 ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 9 | ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ/ ಎಸ್.ಟಿ ಯು.ಜಿ-27 ಮತ್ತು ಪಿ.ಜಿ-03 ಒಟ್ಟು-30 ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ವೈದ್ಯಕೀಯ | ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಲ್ಲಿ 2018-19ನೇ ಸಾಲಿನಲ್ಲಿ ರೂ.29.5 ಲಕ್ಷಗಳು ಸರ್ಕಾರದಿಂದ ಬಿಡುಗಡೆಯಾಗಿದ್ದು, ಸದರಿ ಆದೇಶದಲ್ಲಿ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪುಸ್ತಕಗಳನ್ನು ನೀಡಲು ನಿರ್ದೇಶನವಿದ್ದು, 2018-19ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಯು.ಜಿ-27 ಮತ್ತು ಪಿ.ಜಿ-03 ಒಟ್ಟು-30 ವಿದ್ಯಾರ್ಥಿಗಳಿಗೆ ರೂ.28.00 ಲಕ್ಷಗಳ ವೆಚ್ಚದಲ್ಲಿ ವೈದ್ಯಕೀಯ ಪುಸ್ತಕಗಳನ್ನು ವಿತರಿಸಲು ಇ-ಟೆಂಡರ್ ಆಹ್ವಾನಿಸಿರುವುದನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಪುಸ್ತಕಗಳನ್ನುಇ–ಟೆಂಡರ್ ಮೂಲಕ ಸರಬರಾಜು ಪಡೆದು ವಿತರಿಸುವ ಬಗ್ಗೆ. | ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಕೆ.ಟಿ.ಪಿ.ಪಿ ನಿಯಮಾನುಸಾರ ವೈದ್ಯಕೀಯ ಪುಸ್ತಕಗಳ ಖರೀದಿಗೆ ಇ–ಟೆಂಡರ್ ಆಹ್ವಾನಿಸಿರುವುದನ್ನು ಒಪ್ಪಿ ಸದರಿ ವೈದ್ಯಕೀಯ ಪುಸ್ತಕಗಳ ವೆಚ್ಚವನ್ನು ಎಸ್‌ಸಿಪಿ/ಟಿಎಸ್‌ಪಿ ಯೋಜನೆಯ ಲೆಕ್ಕ ಶೀರ್ಷಿಕೆ 2210–05–105–1–49–422/423 ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 10 | ಸಂಸ್ಥೆಯ ಬೋಧಕ ಆಸ್ಪತ್ರೆಯ ಇ–ಆಸ್ಪತ್ರೆ ನಿರ್ವಹಣೆಗೆ ಅಗತ್ಯವಿರುವ ಕಂಪ್ಯೂಟರ್‌ಗಳು ಪ್ರಿಂಟರ್, ಯು.ಪಿ.ಎಸ್, LAN–Active ಮತ್ತು LAN Passive ಕೇಬಲ್‌ಗಳನ್ನು ಮತ್ತು ಇತರೆ ಪರಿಕರಗಳನ್ನು ಇ–ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯ ಕಾರ್ಯ ಚಟುವಟಿಕೆಗಳನ್ನು ಇ–ಆಸ್ಪತ್ರೆಯನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಇ–ಆಸ್ಪತ್ರೆ ತಂತ್ರಾಂಶವನ್ನು ಅಳವಡಿಸಲು ಅಗತ್ಯವಿರುವ ಕಂಪ್ಯೂಟರ್‌ಗಳು, ಪ್ರಿಂಟರ್, ಯು.ಪಿ.ಎಸ್, ಮತ್ತು LAN –Active ಮತ್ತು LAN- Passive ಕೇಬಲ್‌ಗಳು ಹಾಗೂ ಇತರೆ ಪರಿಕರಗಳು ಸೇರಿದಂತೆ ರೂ.265.00ಲಕ್ಷಗಳಿಗೆ (ಕಂಪ್ಯೂಟರ್, ಪ್ರಿಂಟರ್ ಯುಪಿಎಸ್ ಮತ್ತು ಇತರೆ ಪರಿಕರಗಳಿಗೆ ರೂ.109.00 ಲಕ್ಷಗಳು ಮತ್ತು LAN–Active ಮತ್ತು LAN- Passive ಕೇಬಲ್‌ಗಳನ್ನು ಮತ್ತು ಇತರೆ ಪರಿಕರಗಳು ರೂ.156.00 ಲಕ್ಷಗಳು) ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆಕುಕ, ವೈ.ಶಿ. ಮತ್ತು ರಾಜ್ಯ ನೋಡಲ್ ಅಧಿಕಾರಿಗಳು,ಇ–ಆಸ್ಪತ್ರೆ, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಏಕ ಕಡತದಲ್ಲಿ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಇ–ಟೆಂಡರ್ ಪ್ರಕಟಣೆಹೊರಡಿಸಿರುವುದು ಮತ್ತು ಅಗತ್ಯ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸರ್ಕಾರದ ನಿರ್ದೇಶನದಂತೆ ರೂ.265.00ಲಕ್ಷಗಳ ವೆಚ್ಚದಲ್ಲಿ ಇ–ಆಸ್ಪತ್ರೆಯ ನಿರ್ವಹಣೆಗೆ ಅಗತ್ಯವಿರುವ ಉಪಕರಣಗಳು, LAN- Passive ಕೇಬಲ್‌ಗಳು ಹಾಗೂ ಇತರೆ ಪರಿಕರಗಳ ಅಳವಡಿಕೆಗೆ ಇ–ಟೆಂಡರ್ ಕರೆದಿರುವುದನ್ನು ಹಾಗೂ ಅಗತ್ಯ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಪತ್ರ ಬರೆದಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 11 | 2019ನೇ ಸಾಲಿಗೆ ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕತೆ ಇರುವ ನಿಯತಕಾಲಿಕೆಗಳ | ಸಂಸ್ಥೆಯ ಕೇಂದ್ರ ಗ್ರಂಥಾಲಯ ವಿಭಾಗಕ್ಕೆ Medical council of India, New Delhi regulations 1999 ಪ್ರಕಾರ ಪ್ರತಿ ವರ್ಷ ಕಡ್ಡಾಯವಾಗಿ ನಿಯತಕಾಲಿಕೆಗಳನ್ನು ಖರೀದಿಸಬೇಕಾಗಿದ್ದು, ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಮತ್ತು ಭೋದಕರಿಗೆ 2019 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಸರಬರಾಜಿಗೆ ಇ–ಟೆಂಡರ್ ಕರೆಯುವ ಬಗ್ಗೆ. | ನೇ ಸಾಲಿಗೆ 48 ಅಂತರಾಷ್ಟ್ರಿಯ ನಿಯತಕಾಲಿಗಳು ಹಾಗೂ 64 ರಾಷ್ಟ್ರೀಯ ನಿಯತಕಾಲಿಕೆಗಳು ಸೇರಿದಂತೆ ಒಟ್ಟು 112 ನಿಯತಕಾಲಿಕೆಗಳನ್ನು ಖರೀದಿಸಬೇಕಾಗಿದ್ದು, ಅಂದಾಜು ರೂ.35.00 ಲಕ್ಷ ವೆಚ್ಚಗಳಾಗುವುದರ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ Medical council of India, New Delhi regulations 1999 ಪ್ರಕಾರ 2019ನೇ ಸಾಲಿಗೆ ಅಗತ್ಯವಿರುವ 112 ನಿಯತಕಾಲಿಕೆಗಳ ಅಂದಾಜು ವೆಚ್ಚ ರೂ.35.00 ಲಕ್ಷ ವೆಚ್ಚಗಳಿಗೆ ಒಪ್ಪಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದೆಂದು ಸದರಿ ವೆಚ್ಚವನ್ನು ಸರ್ಕಾರದಿಂದ ಬಿಡುಗಡೆಯಾಗುವ ಲೆಕ್ಕ ಶೀರ್ಷಿಕೆ 2210–05–105–1–49–103ರ ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 12 | ಹಿಮ್ಸ್ ಸಂಸ್ಥೆಯಲ್ಲಿ 2006–07 ರಿಂದ 2012–13ನೇ ಸಾಲಿನ ವರೆಗಿನ ಎಮ್.ಬಿ.ಬಿ.ಎಸ್. ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ್ದು ಸಂಸ್ಥೆಗೆ ಪಾವತಿಸಿದ್ದCaution Deposit ಹಿಂಪಡೆಯದೆ ಇರುವುದರಿಂದ ಸದರಿ ಬಾಬ್ತನ್ನು ಸಂಸ್ಥೆಯ ಆದಾಯವೆಂದು ಪರಿಗಣಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 2006–07 ರಿಂದ 2012–13ನೇ ಸಾಲಿನವರೆವಿಗೆ ವ್ಯಾಸಂಗ ಮಾಡಿರುವ ಎಮ್.ಬಿ.ಬಿ.ಎಸ್. ವಿದ್ಯಾರ್ಥಿಗಳು ಸಂಸ್ಥೆಗೆ ಪಾವತಿಸಿದ್ದ Caution Deposit ಹಿಂಪಡೆಯದೆ ಇರುವುದರಿಂದ 2006–07 ರಿಂದ 2012–13ನೇ ಸಾಲಿನವರೆಗಿನ Caution Deposit ಮೊತ್ತ ರೂ.6,16,500/–ಗಳನ್ನು Lapsed Deposit ಎಂದು ಪರಿಗಣಿಸಿ ಸಂಸ್ಥೆಯ ಖಾತೆಗೆ ಆದಾಯವೆಂದು ಪರಿಗಣಿಸಲು ಆರ್ಥಿಕ ಸಮಿತಿ ಸಭೆಯಿಂದ ಅನುಮೋದನೆ ಪಡೆಯುವಂತೆ ಸಂಸ್ಥೆಯ ಆಂತರೀಕ ಲೆಕ್ಕಪರಿಶೋಧಕರು ಸಲಹೆ ನೀಡಿರುವ ಮಾಹಿತಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ವಿದ್ಯಾರ್ಥಿಗಳಿಂದ ಸಂಗ್ರಹವಾಗಿರುವ Caution Deposit ಮೊತ್ತವನ್ನು Lapsed Deposit ಎಂದು ಪರಿಗಣಿಸುವುದು ಬೇಡ ಸಾಧ್ಯವಾದಷ್ಟು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಮರುಪಾವತಿ ಮಾಡಲು ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 13 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ | ಸಂಸ್ಥೆಯ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳನ್ನು ಪರಿಶೀಲನೆಗಾಗಿ ದಿನಾಂಕ: 5–5–2016 ರಂದು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರಿಗೆ ಸಲ್ಲಿಸಲಾಗಿರುತ್ತದೆ. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಪತ್ರ ಸಂಖ್ಯೆ: ವೈ.ಶಿ./ಎಂಆರ್‌ಬಿ/10/2017–18, |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಅರ್ಹ ಬಾಬ್ತನ್ನು ಪಾವತಿಸಲು ಅನುಮೋದನೆ ಪಡೆಯುವ ಬಗ್ಗೆ. | ದಿನಾಂಕ:29–08–2017ರ ಪತ್ರದಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಆಕುಕ 293 ಸಿಜಿಎಮ್ 2016 (ಭಾಗ–1) ದಿನಾಂಕ:06–06–2017ರ ಆದೇಶದನ್ವಯ ಅನುಬಂಧ (1)ರಲ್ಲಿ ಕಂಡಿಕೆ (4)ರಂತೆ ಜಿಲ್ಲಾ ಆಸ್ಪತ್ರೆಗೆ ಬರುವ ಎಲ್ಲಾ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲುಗಳ ಪರಿಶೀಲನೆ ಮತ್ತು ಮೇಲು ಸಹಿಯನ್ನು ಜಿಲ್ಲಾಚಿಕಿತ್ಸರು ನಿರ್ವಹಿಸುವಂತೆ ಸೂಚಿಸಿದ್ದರ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಸಿ.ಜಿ.ಹೆಚ್.ಎಸ್. ದರಪಟ್ಟಿಯಂತೆ ಕೆಳಕಂಡ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳನ್ನು ಸಂಸ್ಥೆಯ ವೈದ್ಯಕೀಯ ಮಂಡಳಿಯಿಂದ ಪರಿಶೀಲಿಸಿ, ಅರ್ಹ ಮೊತ್ತಕ್ಕೆ ಜಿಲ್ಲಾ ಶಸ್ತ್ರ ಚಿಕಿತ್ಸಕರು ಮೇಲು ಸಹಿಯೊಂದಿಗೆ ದೃಢೀಕರಿಸಿರುತ್ತಾರೆ. ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಆಕುಕ 292 ಎಂಎಸ್ಎಫ್ 2015(2) ದಿನಾಂಕ:09–11–2015ರ ಆದೇಶದಲ್ಲಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರು ಶಿಫಾರಸ್ಸು ಮಾಡಿರುವ ಮೊತ್ತವನ್ನು ಮರಪಾವತಿಸಿರುವ ಬಗ್ಗೆ ಸಂಸ್ಥೆಯ ಆರ್ಥಿಕ ಸಮಿತಿಯ ಅನುಮೋದನೆ ಪಡೆದು ತದನಂತರ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ವೈದ್ಯಕೀಯ ವೆಚ್ಚ ಮರುಪಾವತಿಗೆ ಸೂಕ್ತ ನಿರ್ಣಯ ತೆಗೆದುಕೊಳ್ಳುವಂತೆ ನಿರ್ದೇಶನವಿರುವುದರಿಂದ ಸದರಿ ವಿಷಯವನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. |

| ಕ್ರ ಸಂ | ಹೆಸರು | ನೌಕರರಿಗೆ ರೋಗಿಯ ಸಂಬಂಧ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆದ ಆಸ್ಪತ್ರೆ | ಖಾಯಿಲೆಯ ವಿವರ | ಮರುಪಾವತಿಗಾಗಿ ಸಲ್ಲಿಸಿದ ಮೊತ್ತ | ಪಾವತಿಸಲು ದೃಢೀಕರಿಸಿರುವ ಅರ್ಹ ಮೊತ್ತ |
|---|---|---|---|---|---|
| 1 | ಡಾ. ವಿಶ್ವನಾಥ.ಡಿ. ಸಹ ಪ್ರಾಧ್ಯಾಪಕರು. | ತಾಯಿ ಶಿವ ಅರ್ಥೋಪಿಡಿಕ್ ಹಾಸ್ಪಿಟಲ್ ಆಸ್ಪತ್ರೆ, ಬೆಂಗಳೂರು | Mitral Valve Dysfunction and severe Mitral Restenosis with MVR. | 5,60,000 | 1,19,157–00 |
| 2 | ಡಾ.ಚವನ್ ಪ್ರಮೋದ್ ಬಾಬು ಸಹಾಯಕಪ್ರಾಧ್ಯಾಪಕರು | ಪತ್ನಿ ಮಲ್ನಾಡ್ ಆಸ್ಪತ್ರೆ, ಹಾಸನ. | ಗರ್ಭಾವಸ್ಥೆ ಮತ್ತು ಡೆಲಿವರಿ ಚಿಕಿತ್ಸೆ. | 29,900 | 12,645–00 |
| 3 | ಡಾ.ರವೀಂದ್ರ.ಎನ್. ಮಾಡಿಯಮ್ಮನವರ ಸಹಾಯಕಪ್ರಾಧ್ಯಾಪಕರು | ತಂದೆ ಎಸ್.ಡಿ.ಎಮ್.ಮೆಡಿಕಲ್ ಕಾಲೇಜ್ ಮತ್ತು ಆಸ್ಪತೆ, ಧಾರವಾಡ | AKI Acute GE | 8,6917 | 55,806–00 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ಹಿಮ್ಸ್ ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ | | | | | |
|---|---|---|---|---|---|---|---|
| | | 4 | ಪಾರ್ವತಮ್ಮ<br>ಹೆಚ್.ಎನ್.<br>ಕಛೇರಿ ಅಧೀಕ್ಷಕರು | ಸ್ವಂತ<br>ಶ್ರೀ ಚಾಮರಾಜೇಂದ್ರ<br>ಆಸ್ಪತ್ರೆ, ಹಾಸನ | ಸಕ್ಕರೆ ಖಾಯಿಲೆ | 3,464 | 3,464–00 |
| | | 5 | ವಾಸಂತಿ.ಬಿ.<br>ಕ್ಲಿನಿಕಲ್ ಇನ್ಸ್‌ಪೆಕ್ಟರ್. | ಸ್ವಂತ<br>ಶ್ರೀ ಜಯದೇವ ಆಸ್ಪತ್ರೆ,<br>ಬೆಂಗಳೂರು. | ಎದೆ ನೋವು | 2,772 | 2772–00 |
| | | 6 | ಸುಹೀಲ ಬೇಗಂ<br>ಪ್ರಯೋಗಾಲಯ<br>ತಂತ್ರಜ್ಞರು | ಸ್ವಂತ<br>ಶ್ರೀ ಚಾಮರಾಜೇಂದ್ರ<br>ಆಸ್ಪತ್ರೆ,<br>ಹಾಸನ<br>ಪ್ರಯೋಗಾಲಯ<br>ತಂತ್ರಜ್ಞರು | ಅಸ್ತಮಾ, ನರರೋಗ,<br>ಬಿ.ಪಿ. | 1,839<br>1,925 | 1,839–00<br>1,620–00<br>3,459–00 |
| | | 7 | ಆರ್.ವಿಜಯ್<br>ಕುಮಾರ್.<br>ಉಪನ್ಯಾಸಕರು | ಸ್ವಂತ<br>ಎನ್.ಡಿ.ಆರ್.ಕೆ. ಆಸ್ಪತ್ರೆ,<br>ಹಾಸನ<br>ಸ್ವಂತ<br>ಧರ್ಮಸ್ಥಳ<br>ಆಯುವೇದ ಕಾಲೇಜು.<br>ಆಸ್ಪತ್ರೆ, ಹಾಸನ. | ಸಕ್ಕರೆ ಖಾಯಿಲೆ.<br>Right Shoulder<br>Joint pain. | 6,000<br>10,302 | 3,560–00<br>9,890–00<br>13.450–00 |
| | | 8 | ಶೈಲಜ ಪಿ.ಎಂ<br>ಸಹಾಯಕ<br>ಗ್ರಂಥಪಾಲಕರು | ಸ್ವಂತ<br>ಡಾಂಗೆ ಆಸ್ಪತ್ರೆ, ಹಾಸನ | ಗಂಟಲಿನ ಶಸ್ತ್ರ ಚಿಕಿತ್ಸೆ. | 49,738 | 9,500–00 |
| | | 9 | ರಘುರಾಮ.ಜಿ.ಎನ್.<br>ಶುಶ್ರೂಷಕರು | ಸ್ವಂತ<br>ಎನ್.ಡಿ.ಆರ್.ಕೆ. ಆಸ್ಪತ್ರೆ,<br>ಹಾಸನ | A.C.L. Tear<br>(Surgery) | 54,654 | 23,500–00 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ | | | | | |
|---|---|---|---|---|---|---|---|
| | | 10 | ಅನ್ನಮ್ಮ.ಕೆ.ಸಿ.<br>ಶುಶ್ರೂಷಕರು | ಸ್ವಂತ<br>ಮಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಹಾಸನ. | ರಕ್ತ ಸ್ರಾವ (DUB) | 37,564 | 25,243–00 |
| | | 11 | ಹೇಮಂತ್ ಕುಮಾರ್.ಹೆಚ್.ಸಿ.<br>ಶುಶ್ರೂಷಕರು | ಸ್ವಂತ<br>ಹೆಚ್.ಸಿ.ಜಿ. ಆಸ್ಪತ್ರೆ, ಬೆಂಗಳೂರು. | Chronic Myloid leaukamia | 21600<br>21650 | 21,600–00<br>21,650–00<br>43,250–00 |
| | | 12 | ಅಶ್ವಥ್.ಹೆಚ್.ಆರ್.<br>ಪ್ರಯೋಗಾಲಯ ತಂತ್ರಜ್ಞರು | ಮಗ<br>ಜನತಾ ಆಸ್ಪತ್ರೆ ಹಾಗೂ ರಿಸರ್ಚ್ ಕೇಂದ್ರ, ಹಾಸನ. | Chronic Adeno Tonsillitis | 38,719 | 10.640–00 |
| | | 13 | ಸಂಧ್ಯಾರಾಣಿ.ಕೆ.<br>ಪ್ರ.ದ.ಸ. | ಪತಿ<br>ಹೆಚ್.ಸಿ.ಜಿ. ಆಸ್ಪತ್ರೆ, ಬೆಂಗಳೂರು. | Multipal Myloma | 7,000 | 505–00 |
| | | 14 | ರತ್ನಮ್ಮ.<br>ಗ್ರೂಪ್.ಡಿ. | ಸ್ವಂತ<br>ಎ.ಜೆ. ಹಾಸ್ಪಿಟಲ್ ಮತ್ತು ಸಂಶೋಧನಾ ಕೇಂದ್ರ, ಮಂಗಳೂರು. | ಕಿಡ್ನಿ ವೈಫಲ್ಯ. | 14,611<br>14,427 | 11,407–00<br>3,906–00<br>15,313–00 |
| | | 15 | ಎಂ ಲಕ್ಷೀನಾರಯಣ್<br>ಸಹಾಯಕ ಪ್ರಾಧ್ಯಾಪಕರು | ಸ್ವಂತ<br>ಶ್ರೀ ಧರ್ಮಸ್ಥಳ ಆಯುರ್ವೇದ ಆಸ್ಪತ್ರೆ, ಹಾಸನ. | Hard Stool, Burning Sensation, Incomplete Defecation, | 16,724 | 9,851–00 |
| | | 16 | ಶೈಲಾಜ.ಪಿ.ಎಂ.<br>ಸಹಾಯಕ ಗ್ರಂಥಪಾಲಕರು | ಸ್ವಂತ<br>ಶ್ರೀ ಧರ್ಮಸ್ಥಳ ಆಯುರ್ವೇದ ಆಸ್ಪತ್ರೆ, ಹಾಸನ. | Low Back Pain | 12,410 | 10,356–00 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ | | | | | |
|---|---|---|---|---|---|---|---|
| | | 17 | ಮೋಹನ್ ಕುಮಾರ್.ಎಸ್. ಶುಶ್ರೂಷಕರು | ತಂದೆ ಶ್ರೀ ಧರ್ಮಸ್ಥಳ ಆಯುರ್ವೇದ ಆಸ್ಪತ್ರೆ, ಹಾಸನ. | ಸಕ್ಕರೆ ಖಾಯಿಲೆ ಮತ್ತು ರಕ್ತದೊತ್ತಡ | 21,234 | 12,065–00 |
| | | 18 | ಪಾರ್ವತಮ್ಮ. ಹೆಚ್.ಎನ್. ಕಛೇರಿ ಅಧೀಕ್ಷಕರು. | ಸ್ವಂತ ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ. | ಸಕ್ಕರೆ ಖಾಯಿಲೆ ಮತ್ತು ರಕ್ತದೊತ್ತಡ. | 3,630 | 2,286–00 |
| | | 19 | ಡಾ. ಶ್ರೀಧರ .ಹೆಚ್.ಜಿ. ಸಹ ಪ್ರಾಧ್ಯಾಪಕರು. | ಸ್ವಂತ ರಾಮಯ್ಯ ಮೆಮೋರಿಯಲ್ ಆಸ್ಪತ್ರೆ, ಬೆಂಗಳೂರು. | Near syncope & PVC/ ectopics. | 10,250 | 5,733–00 |
| | | 20 | ಹರೀಶ್. ಬಿ. ಎಲ್. ಓ.ಟಿ. ಟೆಕ್ನಿಷಿಯನ್. | ಪತ್ನಿ ಸಿಎಸ್.ಐ.ಮಿಸಿನ್ ಆಸ್ಪತ್ರೆ, ಹಾಸನ. | LSCS | 18,839 | 12,645–00 |
| | | 21 | ಶಿವರಾಜ.ಮಲ್ಲಪ್ಪ.ಹೆಬ್ಬಾಳ ಶುಶ್ರೂಷಕರು | ಸ್ವಂತ ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ. | Complete Tear of left ACL | 61,804 | 18,850–00 |
| | | 22 | ಬಸವರಾಜ ಗ್ರೂಪ್.ಡಿ. | ಪತ್ನಿ ಎಸ್.ಡಿ.ಎಮ್.ಆಸ್ಪತ್ರೆ, ಮದ್ದೂರು. | ಕಿಡ್ನಿ ಸಮಸ್ಯೆ. | 1,42,768 | 1,13,141–00 |
| | | 23 | ಜಯರಾಮ ಗ್ರೂಪ್ ಡಿ. | ತಾಯಿ ಮತ್ತು ತಂದೆ ವಾತ್ಸಲ್ಯ, ಆಸ್ಪತ್ರೆ, ಹಾಸನ. | ಸಕ್ಕರೆ ಖಾಯಿಲೆ ಮತ್ತು ಕೀಲುಮುರಿದಿರುವುದು. | 80,217 | 69,524–00 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ಹಿಮ್ಸ್ ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ |
|---|---|---|

| | | | | | |
|---|---|---|---|---|---|
| 24 | ಡಾ.ಉಮಾದೇವಿ. ಹೆಚ್. ಆರ್. | ಸ್ವಂತ ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ. | ಸಕ್ಕರೆ ಖಾಯಿಲೆ ಮತ್ತು ಬಿ.ಪಿ | 12,797 | 10,745–00 |
| 25 | ಡಾ. ವಿಶ್ವನಾಥ್.ಡಿ. | ತಂದೆ, ರಿಟಿನಾ ಇನ್‌ಸ್ಟಿಟ್ಯೂಟ್ ಆಫ್ ಕರ್ನಾಟಕ, ಬೆಂಗಳೂರು. | Central Retinal Vien Occlusion of the left eye | 24,440 | 24,440 |
| | **ಒಟ್ಟು ಮೊತ್ತ** | | | | **6,28,340–00** |

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ವೈದ್ಯಕೀಯ ಸೇವೆಗಳ ಚಿಕಿತ್ಸಾ ವೆಚ್ಚವನ್ನು ಅರ್ಹ ಸಿಬ್ಬಂದಿ ಯವರಿಗೆ ನಿಯಮಾನುಸಾರ ಮರುಪಾವತಿ ಮಾಡಬಹುದೆಂದು ಹಾಗೂ ಸದರಿ ವೆಚ್ಚವನ್ನು ಸರ್ಕಾರದಿಂದ ಬಿಡುಗಡೆಯಾಗುವ ಲೆಕ್ಕಶೀರ್ಷಿಕೆ 2210–05–105–1–49–103ರ ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ |
|---|---|---|
| 14 | ಹಿಮ್ಸ್, ಸಂಸ್ಥೆಯಲ್ಲಿ ಶುಶ್ರೂಷಕರಾಗಿ ಸೇವೆ ಸಲ್ಲಿಸುತ್ತಿರುವ 39 ಸಿಬ್ಬಂದಿಗಳಿಗೆ 10 ವರ್ಷಗಳ ಕಾಲಬದ್ಧ ಮುಂಗಡ ವೇತನ ಬಡ್ತಿ ನೀಡುವ ಬಗ್ಗೆ. | ಸಂಸ್ಥೆಯಲ್ಲಿ ಶುಶ್ರೂಷಕರಾಗಿ ಸೇವೆ ಸಲ್ಲಿಸುತ್ತಿರುವ 39 ಸಿಬ್ಬಂದಿಗಳು ನಿರಂತರವಾಗಿ ಒಂದೇ ಹುದ್ದೆಯಲ್ಲಿ 10 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದು, ಸದರಿ ನೌಕರರುಗಳ ಖಾಯಂ ಪೂರ್ಣಸೇವಾವಧಿಯನ್ನು ಘೋಷಿಸಲಾಗಿರುತ್ತದೆ. ಹಾಗೂ ಸದರಿ ನೌಕರರುಗಳ ವಿರುದ್ಧ ಯಾವುದೇ ಇಲಾಖಾ ವಿಚಾರಣೆಗಳು ಬಾಕಿ ಇರುವುದಿಲ್ಲ. ಕೆ.ಸಿ.ಎಸ್.ಆರ್ ನಿಯಮ ಅನುಬಂಧ "ಡಿ"(ಬಿ)ಪ್ರಕಾರ ಒಂದೇ ಹುದ್ದೆಯಲ್ಲಿ ನಿರಂತರವಾಗಿ 10ವರ್ಷಗಳಿಗಿಂತ ಕಡಿಮೆ ಇಲ್ಲದಷ್ಟು ಅವಧಿಯವರೆಗೆ ಸೇವೆ ಸಲ್ಲಿಸಿದ್ದರೆ, ಅವನ ಸೇವಾ ದಾಖಲೆ ತೃಪ್ತಿಕರವಾಗಿದ್ದಲ್ಲಿ ಅಂತಹ ನೌಕರರು ಕಾಲಬದ್ಧ ಮುಂಗಡ ವೇತನ ಬಡ್ತಿಯನ್ನು ಪಡೆಯಲು ಅರ್ಹರೆಂದಿರುತ್ತದೆ. 39 ಶುಶ್ರೂಷಕರುಗಳು ಕಾಲಬದ್ಧ ಮುಂಗಡ ವೇತನ ಬಡ್ತಿ ಪಡೆಯಲು ಅರ್ಹರಾಗಿರುವ ಕೆಳಕಂಡ ಶುಶ್ರೂಷಕರ ಪಟ್ಟಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. |

| ಕ್ರಸಂ. | ಹೆಸರು | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಕಾಲಬದ್ಧ ಪದೋನ್ನತಿಗೆ ಅರ್ಹತಾ ದಿನಾಂಕ | ಪಾವತಿಸಬೇಕಾಗಿರುವ ಬಾಕಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಮಹೇಂದ್ರ.ಹೆಚ್.ಬಿ | 30.11.1981 | 20.09.2007 | 20.09.2018 | 1,04,592.00 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ | | | | | |
|---|---|---|---|---|---|---|---|
| | | 2 | ಸುಕನ್ಯ.ಹೆಚ್.ಎಸ್ | 09.03.1976 | 20.09.2007 | 20.09.2018 | 1,04,592.00 |
| | | 3 | ಮೇರಿಆಶಾ.ಎ | 03.12.1981 | 20.09.2007 | 20.09.2018 | 1,04,592.00 |
| | | 4 | ದಿನೇಶ. | 06.08.1985 | 19.09.2007 | 19.09.2018 | 1,04,592.00 |
| | | 5 | ಸಹ್ಯಾದ್ರಮ್ಮ | 10.12.1975 | 19.09.2007 | 19.09.2018 | 1,04,592.00 |
| | | 6 | ವೀಣಾ.ಪಿ.ಎಸ್ | 03.01.1981 | 19.09.2007 | 19.09.2018 | 1,04,592.00 |
| | | 7 | ಇಂದ್ರಮ್ಮ.ಎಂ.ಎ | 02.04.1981 | 21.09.2007 | 21.09.2018 | 1,04,592.00 |
| | | 8 | ಹೇಮಂತಕುಮಾರ.ಹೆಚ್.ಸಿ | 15.05.1984 | 20.09.2007 | 20.09.2018 | 1,04,592.00 |
| | | 9 | ರಶ್ಮಿ.ಎ.ಎಂ | 22.06.1982 | 21.09.2007 | 21.09.2018 | 1,04,592.00 |
| | | 10 | ಪುಷ್ಪ.ಎಂ.ಕೆ | 06.12.1984 | 19.09.2007 | 19.09.2018 | 1,04,592.00 |
| | | 11 | ಸುಧಾ.ಹೆಚ್.ಎನ್ | 15.04.1981 | 19.09.2007 | 19.09.2018 | 1,04,592.00 |
| | | 12 | ಚಂದ್ರಕಲಾ.ಜಿ.ಪಿ | 12.06.1984 | 19.09.2007 | 19.09.2018 | 1,04,592.00 |
| | | 13 | ಸತೀಶ.ಪಿ | 15.05.1983 | 20.09.2007 | 20.09.2018 | 1,04,592.00 |
| | | 14 | ಮಧು.ಎಂ.ಬಿ | 24.07.1985 | 25.09.2007 | 25.09.2018 | 1,04,592.00 |
| | | 15 | ಪ್ರಮೀಳ.ಸಿ.ಎಸ್ | 23.03.1979 | 18.09.2007 | 18.09.2018 | 1,04,592.00 |
| | | 16 | ಕಲ್ಪನ.ಹೆಚ್.ಸಿ | 21.12.1980 | 19.09.2007 | 19.09.2018 | 1,04,592.00 |
| | | 17 | ಕುಮಾರ.ಸಿ.ಆರ್ | 06.08.1985 | 21.09.2007 | 21.09.2018 | 1,04,592.00 |
| | | 18 | ಸುಜಯಕುಮಾರ.ಬಿ.ವಿ | 09.05.1984 | 19.09.2007 | 19.09.2018 | 1,04,592.00 |
| | | 19 | ವಿಜಯಕುಮಾರಿ.ಬಿ.ಆರ್ | 08.04.1984 | 19.09.2007 | 19.09.2018 | 1,04,592.00 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ | | | | | |
|---|---|---|---|---|---|---|---|
| | | 20 | ಸ್ವಜಾತ.ಎಂ.ಡಿ | 14.07.1978 | 27.09.2007 | 27.09.2018 | 1,04,592.00 |
| | | 21 | ಶಿನಿ ಅಗಸ್ಟಿನ್ | 04.02.1984 | 27.09.2007 | 27.09.2018 | 1,04,592.00 |
| | | 22 | ಕೃಷ್ಣೇಗೌಡ.ವಿ.ಆರ್ | 05.04.1979 | 21.09.2007 | 21.09.2018 | 1,04,592.00 |
| | | 23 | ಆಶಾ.ಡಿ.ಎಂ | 30.08.1980 | 19.09.2007 | 19.09.2018 | 1,04,592.00 |
| | | 24 | ಮಣಿ.ಬಿ.ಪಿ | 15.03.1973 | 20.09.2007 | 20.09.2018 | 1,04,592.00 |
| | | 25 | ಮೋಹಿನಿ.ಹೆಚ್.ಎಸ್ | 20.07.1976 | 24.09.2007 | 24.09.2018 | 1,04,592.00 |
| | | 26 | ರವಿ.ಕೆ.ವೈ | 11.06.1985 | 20.09.2007 | 20.09.2018 | 1,04,592.00 |
| | | 27 | ಲತಾ.ಎ.ಎನ್ | 06.06.1982 | 20.09.2007 | 20.09.2018 | 1,04,592.00 |
| | | 28 | ರಜನಿ.ಕೆ.ಎ | 13.10.1979 | 29.09.2007 | 29.09.2018 | 1,04,592.00 |
| | | 29 | ಸಣ್ಣಮ್ಮ.ಎಸ್ | 15.06.1977 | 25.09.2007 | 25.09.2018 | 1,04,592.00 |
| | | 30 | ಶಾರದಾ.ಬಿ.ಎಸ್ | 01.06.1972 | 29.09.2007 | 29.09.2018 | 1,04,592.00 |
| | | 31 | ಸರೋಜಮ್ಮ.ವಿ | 25.01.1973 | 24.09.2007 | 24.09.2018 | 1,04,592.00 |
| | | 32 | ಪೂರ್ಣಿಮ.ಕೆ | 01.04.1984 | 04.10.2007 | 04.09.2018 | 1,04,592.00 |
| | | 33 | ಫರಿದಾ.ಎ | 25.01.1981 | 21.09.2007 | 21.09.2018 | 1,04,592.00 |
| | | 34 | ಶಾರದಾ.ಹೆಚ್.ಡಿ | 18.07.1973 | 27.09.2007 | 27.09.2018 | 1,04,592.00 |
| | | 35 | ಮೋಹನ.ಬಿ.ವಿ | 06.05.1975 | 20.09.2007 | 20.09.2018 | 1,04,592.00 |
| | | 36 | ಭಾಗ್ಯ.ಡಿ.ಎಂ | 22.08.1980 | 18.09.2007 | 18.09.2018 | 1,04,592.00 |
| | | 37 | ಸುನೀತ.ಬಿ.ಪಿ | 21.07.1983 | 21.09.2007 | 21.09.2018 | 1,04,592.00 |

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರಮಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>
<table>
<tr><td>38</td><td>ಜಯಂತಿ ಬಿ.ಎಮ್.</td><td>02.03.1978</td><td>17.03.2007</td><td>17.03.2018</td><td>1,05,223.00</td></tr>
<tr><td>39</td><td>ದಾಕ್ಷಾಯಿಣಿ</td><td>20.07.1980</td><td>04.08.2008</td><td>04.08.2018</td><td>46,952.00</td></tr>
<tr><td></td><td colspan="4">ಒಟ್ಟು ಮೊತ್ತ</td><td>40,22,079.00</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು. 39 ಶುಶ್ರೂಷಕರುಗಳು ಕೆ.ಸಿ.ಎಸ್.ಆರ್ ನಿಯಮ ಅನುಬಂಧ "ಡಿ"(ಬಿ)ಪ್ರಕಾರ, ಕಾಲಬದ್ಧ ಮುಂಗಡ ವೇತನ ಬಡ್ತಿ ಪಡೆಯಲು ಅರ್ಹರಾಗಿರುವುದರಿಂದ ಕಾಲಬದ್ಧ ಪದೋನ್ನತಿ ~~ಅರ್ಹತಾ ದಿನಾಂಕದಿಂದ~~ DPC ... ಅನ್ವಯವಾಗುವಂತೆ ಕಾಲಬದ್ಧ ಮುಂಗಡ ವೇತನ ಬಡ್ತಿಯನ್ನು ಮಂಜೂರು ಮಾಡುವುದೆಂದು ಹಾಗೂ ಸದರಿ ವೆಚ್ಚವನ್ನು ಸರ್ಕಾರದಿಂದ ಬಿಡುಗಡೆಯಾಗುವ ಲೆಕ್ಕಶೀರ್ಷಿಕೆ 2210–05–105–1–49–101 ರ ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.
</td></tr>
<tr><td>15</td><td>ಸಂಸ್ಥೆಯ ಬೋಧಕ ಆಸ್ಪತ್ರೆಯ ಕ್ಯಾನ್ಸರ್ ಘಟಕ್ಕೆ 6 ಕೆ.ವಿ.ಎ ಆನ್‌ಲೈನ್ ಯುಪಿಎಸ್‌ನ್ನು ಇ–ಟೆಂಡರ್ ಮೂಲಕ ಸರಬರಾಜು ಪಡೆದು ಅಳವಡಿಸುವ ಬಗ್ಗೆ.</td><td>ಸಂಸ್ಥೆಯ ಬೋಧಕ ಆಸ್ಪತ್ರೆಯ ಕ್ಯಾನ್ಸರ್ ಘಟಕದಲ್ಲಿ ಭಾಭಾಟ್ರಾನ್ ರೇಡಿಯೋಥೆರಪಿ ಉಪಕರಣಕ್ಕೆ 6 ಕೆ.ವಿ.ಎ ಆನ್‌ಲೈನ್ ಯುಪಿಎಸ್ ಅಳವಡಿಸುವಂತೆ ಸರ್ವಿಸ್ ಇಂಜಿನಿಯರ್ ರವರು ಸೂಚಿಸಿದ್ದು, ಸದರಿ ಉಪಕರಣಕ್ಕೆ ಅಂದಾಜು ರೂ.2.69 ಲಕ್ಷಗಳಾಗಲಿದ್ದು, ನಿಯಮಾನುಸಾರ ಖರೀದಿಸುವ ಬಗ್ಗೆ ನಿರ್ದೇಶಕರು, ಸಭೆಯ ಮುಂದೆ ಮಂಡಿಸಿದರು.<br><br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಕ್ಯಾನ್ಸರ್ ಘಟಕದಲ್ಲಿನ ಭಾಭಾಟ್ರಾನ್ ರೇಡಿಯೋಥೆರಪಿ ಉಪಕರಣದ ನಿರ್ವಹಣೆಗೆ 6. ಕೆ.ವಿ.ಎ ಆನ್‌ಲೈನ್ ಯುಪಿಎಸ್‌ನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000 ರ ಅನ್ವಯ ಇ–ಟೆಂಡರ್ ಮೂಲಕ ಸರಬರಾಜು ಪಡೆದು ಸದರಿ ಮೊತ್ತವನ್ನು ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br><br>"ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು"</td></tr>
</table>

ಆರ್ಥಿಕ ಸಲಹೆಗಾರರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ – 573 201

ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ಹಾಗೂ ಸದಸ್ಯರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬಹುಮಹಡಿಗಳ ಕಟ್ಟಡ,
ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ಜಾವೇದ್ ಅಖ್ತರ್
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)